ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 10/2025**

| ಸಾಕ್ಷಿಯ ಹೆಸರು | ಶ್ರೀ ಅರುಣ್ ಕುಮಾರ್ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ನಾರಾಯಣಸ್ವಾಮಿ | 2 | 1 |
| ವಯಸ್ಸು | 36 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **16.03.2026.** | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಮುಗಬಾಳ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಚಾ ಸಾ 1 ನನ್ನ ಮಾವ. ಚಾ ಸಾ 4 ನನ್ನ ಚಿಕ್ಕಮಾವ. ಚಾ ಸಾ 3 ನನ್ನ ದೊಡ್ಡಮ್ಮನ ಮಗ. ಆರೋಪಿತರು ಗೊತ್ತು. ದಿನಾಂಕ 09.02.2023 ರಲ್ಲಿ ಬೆಳಗ್ಗೆ 10.00 ಗಂಟೆಗೆ ಜಿ.ಎಂ.ಕೃಷ್ಣಪ್ಪನವರ ನಿವೇಶನದ ಬಳಿ ಕಂಬ ಊಳಲು ಆರೋಪಿತರು ಹೋಗಿದ್ದರು. ಚಾ ಸಾ 1 ಕೃಷ್ಣಪ್ಪ ಈ ಜಮೀನು ನಮ್ಮದು, ಇಲ್ಲಿ ಉಳುಮೆ ಮಾಡಲು ಬರಬೇಡಿ ಎಂದು ಹೇಳಿದ್ದರಿಂದ ಗಲಾಟೆಯಾಯಿತು. ಮೊದಲು ನೂಕುನುಗ್ಗಲು ಉಂಟಾಗಿ ಆರೋಪಿ ಪಿರ್ಯಾದಿಯವರನ್ನು ತಳ್ಳಿದರು. ನಂತರ ಪಿರ್ಯಾದಿ ಗಲಾಟೆ ಬೇಡ, ನಡೆಯಿರಿ ಎಂದು ಮುಂದೆ ಹೋಗಬೇಕಾದಾಗ ಆರೋಪಿತರು ರಾಡ್ ನಿಂದ ತಲೆಗೆ ಹಿಂಭಾಗದಿಂದ ಹೊಡೆದರು. ನನಗೂ ಸಹ ರಾಡ್ ನಿಂದ ಆರೋಪಿತರು ತಲೆಗೆ ಹೊಡೆದಿದ್ದು, ನಾನು ಸ್ಥಳದಲ್ಲೇ ಬಿದ್ದು ಹೋದೆ. ಮುನಿರಾಜುರವರು ಸಹ ಕೆಳಗೆ ಬಿದ್ದಿದ್ದರು. ಅಶ್ವಥ್ ರವರಿಗೆ ದೊಣ್ಣೆಯಿಂದ ಆರೋಪಿತರು ಹೊಡೆದರು. ನಂತರ ಪಿರ್ಯಾದಿ ಹೊಸಕೋಟೆಯ ಶ್ರೀನಿವಾಸ ನರ್ಸಿಂಗ್ ಹೋಂ ಗೆ ನಮ್ಮನ್ನು ಕಳುಹಿಸಿದರು. ಈಗ ನನಗೆ ತೋರಿಸಿದ ದೊಣ್ಣೆ ಮತ್ತು ರಾಡನ್ನು ಆ ದಿನ ಅಮಾನತ್ತುಪಡಿಸಿಕೊಂಡಿದ್ದು, ಅವುಗಳನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡರು. ಆಸ್ಪತ್ರೆಯಲ್ಲಿ ಎರಡು ದಿನ ದಾಖಲಾಗಿದ್ದೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ವಕೀಲರಿಂದ ಶ್ರೀ. ವಕೀಲರ ಪರವಾಗಿ :</u> ಆರೋಪಿ ಪರ ವಕೀಲರು ಕಲಂ 231 ಸಿ.ಆರ್.ಪಿ.ಸಿ. ಅಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-

**(ಶ್ರೀಮತಿ. ಬಿ.ಎಸ್.ರೇಖಾ )**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಆರೋಪಿ ಪರ ವಕೀಲರು ಕಲಂ. 254 (4) B.N.S.S. ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಚಾಸಾ. 2 ಮತ್ತು 11 ರವರ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿದ್ದು, ಅನುಮತಿ ನೀಡಲಾಯಿತು.

ಆರೋಪಿಯನ್ನು ಪರಪ್ಪನ ಅಗ್ರಹಾರದಿಂದ ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರು ಪಡಿಸಿದ್ದು ಸಾಕ್ಷಿ ಗುರುತಿಸಿರುತ್ತಾರೆ.

ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ್ದು ಶರ್ಟ, ಪ್ಯಾಂಟ್ ಮತ್ತು ಬನಿಯನ್ ಅನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ಫೋಟೋ ಆ ಸ್ಥಳದಲ್ಲಿ ಮಹಜರ್ ಕಾಲಕ್ಕೆ ತೆಗೆದಿದ್ದು ಅದನ್ನು ನಿಶಾನೆ.ಪಿ. 3 ಎಂದು ಗುರುತಿಸಲಾಯಿತು.

ಆ ವಿಚಾರದಲ್ಲಿ ಪೊಲೀಸರು ಸ್ಥಳಕ್ಕೆ ಬಂದು ನೋಟೀಸ್ ಕೊಟ್ಟು ನನ್ನ ಸಮಕ್ಷಮ, ಎರಡು ಪ್ಲಾ ಸ್ಟಿಕ್ ಪೈಪ್ ಗಳು, ಒಂದು ದೊಣ್ಣೆ, ಕಲ್ಲು, ರಕ್ತ ಕಲೆಯಾದ ಶರ್ಟ ಅನ್ನು ವಶಕ್ಕೆ ಪಡೆದರು ಎಂದರೆ ಸರಿ ಅಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದೆರ ಸರಿ ಅಲ್ಲ.

ನಾನು ಅದರ ಸಂಬಂಧವಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಯ ಭಾಗವನ್ನು ಓದಿ ತೋರಿಸಿದಾಗ ಸಾಕ್ಷಿ ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಸಮಯ ಕೋರಿದ್ದು, ಯಾವುದೇ ಸೂಕ್ತವಾದ ಕಾರಣ ತೋರಿಸಿಲ್ಲ ಆದ್ದರಿಂದ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಆರೋಪಿ ನಂ. 1 ಅನ್ನು ಸೇಲಂ ಕಾರಗೃಹದಿಂದ ಮೊಬೈಲ್ ಸಂಖ್ಯೆ 8217359642 ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರು ಪಡಿಸಿದ್ದು ಸಾಕ್ಷಿ ಗುರುತಿಸಲ್ಲಿ.

ಸಮಯ ಕೋರಿದ್ದು, ಯಾವುದೇ ಸೂಕ್ತವಾದ ಕಾರಣ ತೋರಿಸಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಆರೋಪಿತರ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಹೆಚ್.ಎಸ್. ವಕೀಲರಿಂದ : ಸಮಯ ಕೋರಿದ್ದು, ರೂಪಾಯಿ 500/- ಖರ್ಚಿನೊಂದಿಗೆ ಮುಂದೂಡಲಾಯಿತು.